# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 890 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ |
| ಉತ್ತರಿಸುವ ದಿನಾಂಕ | 13-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಯಲ್ಲಿ ಪೌರೋಹಿತ್ಯ ಕಾರ್ಯ ಚಟುವಟಿಕೆಯಲ್ಲಿ ನೊಂದಣಿ ಹೊಂದಿದ ಪುರೋಹಿತರ ಸಂಖ್ಯೆ ಎಷ್ಟು? ಹಾಗಿದ್ದಲ್ಲಿ ಅವರುಗಳಿಗೆ ಇರುವ ಸರ್ಕಾರದ ಸವಲತ್ತುಗಳೇನು; (ವಿವರ ನೀಡುವುದು.) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಪೌರೋಹಿತ್ಯ ಕಾರ್ಯ ಚಟುವಟಿಕೆಯೆಂಬ ನೋಂದಣಿಯು ಇಲಾಖೆಯಲ್ಲಿ ಇರುವುದಿಲ್ಲ.<br><br>ಆದರೆ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಒಟ್ಟು 31,831 ಅರ್ಚಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ಈ ಕೆಳಕಂಡ ಸವಲತ್ತುಗಳನ್ನು ಒದಗಿಸಲಾಗಿದೆ.<br><br>i. ಆದಾಯವಿರುವ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರುಗಳಿಗೆ ತಟ್ಟೆಕಾಸು, ಸೇವಾ ಕಮೀಷನ್, ಸೇವಾಂತ ಸೌಲಭ್ಯಗಳು ಹಾಗೂ<br>ii. ಆದಾಯವಿರುವ ಕೆಲವು "ಎ" ವರ್ಗದ ದೇವಾಲಯಗಳ ಅರ್ಚಕರುಗಳಿಗೆ ಸರ್ಕಾರಿ ನೌಕರರಿಗೆ ನಿಗದಿಪಡಿಸಲಾದ ವೇತನ ಶ್ರೇಣಿ ರೂ.27,650-52,650/- ಗಳನ್ನು ನಿಗದಿಪಡಿಸಲಾಗಿದೆ.<br>iii. ಹಾಗೂ ಆದಾಯ ಕಡಿಮೆ ಇರುವ ಕೆಲವು "ಎ" ಮತು "ಬಿ" ವರ್ಗದ ದೇವಾಲಯಗಳಲ್ಲಿ ನಿಯಮದಲ್ಲಿ ಅವಕಾಶ ಇರುವಂತೆ ವಾರ್ಷಿಕ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇಕಡ 35 ರಷ್ಟು ಮೀರದಂತೆ ವೇತನ ನಿಗದಿಪಡಿಸಿ ನೀಡಲಾಗುತ್ತಿದೆ. ಮತ್ತು "ಸಿ" ವರ್ಗದ ದೇವಾಲಯಗಳಿಗೆ ವಾರ್ಷಿಕ ರೂ.60,000-00ಗಳ ತಸ್ತೀಕ್/ವರ್ಷಾಸನ ನೀಡಲಾಗುತ್ತಿದೆ.<br>ಪ್ರವರ್ಗ 'ಸಿ' ವರ್ಗದ ದೇವಾಲಯದ ಅರ್ಚಕರು ಮೃತಪಟ್ಟಲ್ಲಿ ರೂ.2.00 ಲಕ್ಷಗಳ ಪರಿಹಾರ ಮೊತ್ತವನ್ನು ಅವರ ಕುಟುಂಬದ ವಾರಸುದಾರರಿಗೆ ನೀಡಲು ಪ್ರಸಕ್ತ ಸಾಲಿನಿಂದ ಯೋಜನೆ ಜಾರಿಗೆ ತರಲು ಕ್ರಮವಹಿಸಲಾಗಿದೆ. |

| | | |
|---|---|---|
| | | v. ಅರ್ಚಕರುಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನವಾಗಿ ನೀಡುವ ಯೋಜನೆ ಯನ್ನು ಪ್ರಸಕ್ತ ಸಾಲಿನಿಂದ ಜಾರಿಗೆ ತರಲು ಕ್ರಮವಹಿಸಲಾಗಿದೆ.<br>vi. ತಸ್ತೀಕ್ ಹಣವನ್ನು ನೇರವಾಗಿ ಅರ್ಚಕರ ಖಾತೆಗೆ ಡಿಬಿಟಿ ಮೂಲಕ ವರ್ಗಾವಣೆ ಮಾಡಲು ಕ್ರಮವಹಿಸಲಾಗಿದೆ.<br>vii. ಕರ್ನಾಟಕ ಭಾರತ್ ಗೌರವ್ ಕಾಶಿ ಗಯಾ ಯಾತ್ರೆಗೆ ಪ್ರವರ್ಗ ಸಿ ಅಧಿಸೂಚಿತ ದೇವಾಲಯಗಳ ಅರ್ಚಕರು ಮತ್ತು ಕುಟುಂಬದ ಒಬ್ಬರನ್ನು ಉಚಿತವಾಗಿ ಕಳುಹಿಸಲು ಕ್ರಮವಹಿಸಲಾಗಿದೆ.<br>viii. ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ ಸಿ ಅಧಿಸೂಚಿತ ದೇವಾಲಯಗಳಲ್ಲಿನ ಅರ್ಚಕರು ನಿಧನರಾದಲ್ಲಿ/ ಅರ್ಚಕರು ವಯಸ್ಸಾದ ಸಂದರ್ಭದಲ್ಲಿ / ತೀವ್ರ ಅನಾರೋಗ್ಯ ನಿಮಿತ್ತಾ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದೇ ಇರುವ ಸಂದರ್ಭದಲ್ಲಿ ಅನುವಂಶಿಕ ಹಕ್ಕನ್ನು ಕಾನೂನು ಬದ್ಧ ವಾರಸುದಾರರಿಗೆ ತಹಶೀಲ್ದಾರ್ ಹಂತದಲ್ಲಿ ವರ್ಗಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ. |
| ಆ) | ರಾಜ್ಯದಲ್ಲಿರುವ ಮುಜರಾಯಿ ಇಲಾಖೆಯಡಿ ಧಾರ್ಮಿಕ ಕಾರ್ಯ ಪೂಜಾ ಕೈಂಕರ್ಯವನ್ನು ನಿರಂತರವಾಗಿ ನಿರ್ವಹಿಸುವ ಪುರೋಹಿತರುಗಳಿಗೆ ಸರ್ಕಾರದ ವತಿಯಿಂದ ಸ್ವಂತ ವಾಸದ ಮನೆ ಕಲ್ಪಿಸಲು ಕ್ರಮ ವಹಿಸುವುದೇ? (ವಿವರ ನೀಡುವುದು) | ರಾಜ್ಯ ಧಾರ್ಮಿಕ ಪರಿಷತ್ತಿನ ದಿನಾಂಕ:13-10-2023 ರ ಸಭೆಯಲ್ಲಿ ವಿಷಯ ಸೂಚಿ ಸಂಖ್ಯೆ 37ರಲ್ಲಿ "ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯ/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ದೇವಾಲಯಗಳ ಬಳಿ ಸ್ಥಳಾವಕಾಶದ ಲಭ್ಯತೆಗೆ ಅನುಗುಣವಾಗಿ ವಸತಿ ಇಲಾಖೆಯ ಸಹಯೋಗದೊಂದಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.<br><br>ಸದರಿ ನಡವಳಿಯಂತೆ ಅರ್ಚಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಮುಜರಾಯಿ ದೇವಸ್ಥಾನಗಳ ಪ್ರದೇಶಗಳಲ್ಲಿ ಅರ್ಚಕರುಗಳ ವಾಸಕ್ಕೆ ಅನುಕೂಲವಾಗುವಂತೆ ವಸತಿ ಇಲಾಖೆಯ ಸಹಭಾಗಿತ್ವದಲ್ಲಿ ಗೃಹ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಂಇ 128 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು